KACB200010282024

# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಾಗೇಪಲ್ಲಿ.

ದಿನಾಂಕ 31 ನೇ ಮಾಹೆ ಜುಲೈ 2026

ಉಪಸ್ಥಿತರು

**ಶ್ರೀಮತಿ. ರಂಜಿತ.ಎಸ್.,** ಎಂ.ಎಸ್.ಡಬ್ಲ್ಯೂ. ಎಲ್.ಎಲ್.ಬಿ.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

## ಸಿ.ಸಿ ಸಂಖ್ಯೆಃ 578 / 2024

ಫಿರ್ಯಾದುದಾರರು : ಸರ್ಕಾರದ ಪರವಾಗಿ,
ಪಾತಪಾಳ್ಯ ಆರಕ್ಷಕ ಠಾಣೆ
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

- *ವಿರುದ್ಧ* -

ಆರೋಪಿರುಃ

1. ಶ್ರೀಮತಿ. ಲಕ್ಷ್ಮೀನರಸಮ್ಮ
ಕೋಂ. ಲೇಟ್. ಪೆದ್ದ ಆಂಜಿನಪ್ಪ
ವಯಸ್ಸು ಸುಮಾರು 55 ವರ್ಷ,

2. ಶ್ರೀ. ವೆಂಕಟೇಶ
ಬಿನ್ ಲೇಟ್. ಪೆದ್ದ ಆಂಜಿನಪ್ಪ
ವಯಸ್ಸು ಸುಮಾರು 38 ವರ್ಷ,

3. ಶ್ರೀ. ನಾಗರಾಜ
ಬಿನ್ ಲೇಟ್. ಪೆದ್ದ ಆಂಜಿನಪ್ಪ
ವಯಸ್ಸು ಸುಮಾರು 35 ವರ್ಷ,

4. ಶ್ರೀಮತಿ. ಮಂಜುಳಾ
ಕೋಂ ಚಿನ್ನ ಆಂಜಿನಪ್ಪ,
ವಯಸ್ಸು ಸುಮಾರು 42 ವರ್ಷ,

ಎಲ್ಲರ ವಾಸಃ ರಾಚವಾರಿ ಪಲ್ಲಿ,
ಬಾಗೇಪಲ್ಲಿ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

(ಪ್ರತಿನಿಧಿಸುವವರು **ಶ್ರೀ. ಆರ್.ಜೆ.,** ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 27.04.2024 |
| ಅಪರಾಧ ವರದಿಯಾದ ದಿನಾಂಕ | : | 27.04.2024 |
| ಫಿರ್ಯಾದುದಾರರ ಹೆಸರು | : | ಶ್ರೀಮತಿ. ಸುನೀತ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 16.07.2026 |
| ತಿರ್ಪಿನ ದಿನಾಂಕ | : | 31.07.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಭಾರತೀಯ ದಂಡ ಸಂಹಿತೆ, ಕಲಂ 504, 324, 323, 355, 506 ಮತ್ತು ಸಹವಾಚಕ ಕಲಂ 34. |
| ನ್ಯಾಯಾಧೀಶರ ಅಭಿಪ್ರಾಯ | : | ಭಾರತೀಯ ದಂಡ ಸಂಹಿತೆ, ಕಲಂ 504, 324, 323, 355, 506 ಮತ್ತು ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿತರನ್ನು ದೋಷ ಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು, ಬಾಗೇಪಲ್ಲಿ |
| ಆರೋಪಿತರ ಪರವಾಗಿ | : | ಶ್ರೀ. ಆರ್.ಜೆ., ವಕೀಲರು |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಅವಧಿ | : | ವರ್ಷಗಳು 02 ತಿಂಗಳು 03 ದಿನಗಳು 04 |

**: ತೀರ್ಪು :**

ದಿನಾಂಕ 27.04.2024 ರಂದು ಸಂಜೆ ಸುಮಾರು 7:30 ಗಂಟೆಗೆ ಫಿರ್ಯಾದದಾರರು ನೀಡಿದ ಹೇಳಿಕೆಯ ಮೇರೆಗೆ ದೂರನ್ನು ದಾಖಲಿಸಿಕೊಂಡು ಆರೋಪಿತರ ವಿರುದ್ದ ಠಾಣಾ ಮೊ.ಸಂಖ್ಯೆ 027/2024 ರಂತೆ ಭಾರತೀಯ ದಂಡ ಸಂಹಿತೆ, ಕಲಂ 323, 324, 355, 504, 506 ಮತ್ತು ಸಹವಾಚಕ ಕಲಂ 34 ಅಡಿಯಲ್ಲಿನ ಆರೋಪಗಳಿಗೆ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿರುತ್ತದೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ**

ದಿನಾಂಕ 27.04.2024 ರಂದು ಮಧ್ಯಾಹ್ನ 12-30 ಗಂಟೆ ಸಮಯದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ರಾಚವಾರಿಪಲ್ಲಿ ಗ್ರಾಮದ ಚಾಸಾ.1 ಮತ್ತು 2 ರವರು ತಮ್ಮ ಮಗುವಿಗೆ ಆರೋಗ್ಯ ಸರಿಯಿಲ್ಲದ ಕಾರಣ ಚಿಕಿತ್ಸೆಗಾಗಿ ಬಸ್ಸಿನಲ್ಲಿ ಬಾಗೇಪಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಾಗ, 3ನೇ ಆರೋಪಿಯು ಚಾಸಾ.2 ರವರಿಗೆ ಜಮೀನಿನ ತಕರಾರಿನ ವಿಚಾರದಲ್ಲಿ ಫೋನ್ ಮಾಡಿ ಎಲ್ಲಿದ್ದಿಯಾ ಬಾ ನಾ ಕೊಡಕ ನಿ ಎಮ್ಮ ದೆಂಗಾ ಲೋಪರ್ ನ ಕೊಡಕಾ ಇತ್ಯಾದಿ ಅವಾಚ್ಯ ಶಬ್ದಗಳಿಂದ ಬೈದಿದ್ದು ಈ ಬಗ್ಗೆ, 3ನೇ ಆರೋಪಿಯನ್ನು ವಿಚಾರಿಸೋಣವೆಂದು ಚಾಸಾ.1 ಮತ್ತು 2 ರವರು ಬಸ್ಸಿನಿಂದ ಇಳಿದು ಪುನಃ ಬೇರೆ ಬಸ್ಸಿನಲ್ಲಿ ವಾಪಸ್ಸು ರಾಚವಾರಿಪಲ್ಲಿ ಗ್ರಾಮಕ್ಕೆ ಹೋಗಿ ಅದೇ ದಿನ ಮದ್ಯಾಹ್ನ 1-00 ಗಂಟೆಯಲ್ಲಿ ಸದರಿ ಗ್ರಾಮದ ಚಾಸಾ.3 ರವರ ಮನೆಯ ಮುಂದೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಅಲ್ಲಿಯೇ ಕಾಯ್ದುಕೊಂಡಿದ್ದ 1 ರಿಂದ 3ನೇ ಆರೋಪಿಗಳನು ಸಮಾನ ಉದ್ದೇಶದಿಂದ ಚಾಸಾ.1 ಮತ್ತು 2 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿ, ಆ ಪೈಕಿ 3ನೇ ಆರೋಪಿಯು ತನ್ನ ಕೈಯಲ್ಲಿ ಕಬ್ಬಿಣದ ರಾಡ್ ನಿಂದ ಚಾಸಾ.2 ರವರ ಹಣೆಯ ಬಲಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿದ್ದು, 2ನೇ ಆರೋಪಿಯು ದೊಣ್ಣೆಯಿಂದ ಚಾಸಾ.2 ರವರ ಮೈಮೇಲೆ ಹೊಡೆದು ಮೂಗೇಟು ಉಂಟು ಮಾಡಿದ್ದು, ಅಡ್ಡ ಹೋದ ಚಾಸಾ.1 ರವರಿಗೆ 3ನೇ ಆರೋಪಿಯು ಕಾಲಿನಿಂದ ಹೊಟ್ಟೆಗೆ ಒದ್ದು ನೋವುಂಟು ಮಾಡಿದ್ದು, ಅಷ್ಟರಲ್ಲಿ ಸ್ಥಳಕ್ಕೆ ಬಂದ 4ನೇ ಆರೋಪಿಯು ಚಾಸಾ.1 ರವರ ಜುಟ್ಟನ್ನು ಹಿಡಿದು ಎಳೆದು ನೆಲದ ಮೇಲೆ ಬೀಳಿಸಿ ನೋವುಂಟು ಮಾಡಿದ್ದು, 3ನೇ ಆರೋಪಿಯು ಚಾಸಾ.2 ರವರಿಗೆ ಚಪ್ಪಲಿಯಿಂದ ಸಾರ್ವಜನಿಕ ಸ್ಥಳದಲ್ಲಿ ಹೊಡೆದು ಅವಮಾನ ಮಾಡಿರುತ್ತಾನೆ ಹಾಗೂ 1 ರಿಂದ 4 ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ.1 ಮತ್ತು 2 ರವರನ್ನು ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದ್ದು, ಆ

ಮೂಲಕ ಭಾರತೀಯ ದಂಡ ಸಂಹಿತೆ,ಕಲಂ 323, 324, 355, 504, 506 ಮತ್ತು ಸಹವಾಚಕ ಕಲಂ 34 ಅಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

**3.** ಈ ನ್ಯಾಯಾಲಯವು ಘಟನೆ ನಡೆಯಿತೆನ್ನಲಾದ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದು ಕೊಂಡು, 1 ರಿಂದ 4ನೇ ಆರೋಪಿತರಿಗೆ ನ್ಯಾಯಾಲಯದ ಹಾಜರಾತಿಗಾಗಿ ಸಮನ್ಸನ್ನು ಹೊರಡಿಸಿರುತ್ತದೆ. ಆರೋಪಿತರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನನ್ನು ಪಡೆದು ಕೊಂಡಿರುತ್ತಾರೆ. ಆರೋಪಿತರಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 207ರ ರೀತಿ ಅಗತ್ಯಪಡಿಸಿರುವಂತೆ ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಕಲಂ 504, 324, 323, 355, 506 ಮತ್ತು ಸಹವಾಚಕ ಕಲಂ 34 ರ ಆರೋಪಗಳಿಗಾಗಿ ಆರೋಪಿತರ ವಿರುದ್ಧದ ದೋಷಾರೋಪಣೆಯನ್ನು ತಯಾರಿಸಿ, ಓದಿ, ವಿವರಿಸಲಾಗಿ ಆರೋಪಿತರು ತನ್ನ ವಿರುದ್ಧದ ಆರೋಪಗಳನ್ನು ಅಲ್ಲಗಳೆದದ್ದು, ಸದರಿ ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು. ಭಾರತೀಯ ದಂಡ ಸಂಹಿತೆ ಕಲಂ 325 ರನ್ವಯ ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಅಂಶಗಳು ಕಂಡುಬರದೆ ಇವರು ಕಾರಣ ಸದರಿ ಕಲಂನ್ವಯ ದೋಷಾರೋಪಣೆಯನ್ನು ರಚಿಸಲು ಕೈಬಿಡಲಾಗಿದೆ.

**4.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಬೆಂಬಲಿಸಿ, ಫಿರ್ಯಾದಿದಾರರು ಸಾಕ್ಷಿ ಚಾ.ಸಾ.1 ಮತ್ತು ಗಾಯಾಳು ಸಾಕ್ಷಿದಾರರಾದ ಚಾ.ಸಾ.2 ರವರನ್ನು ಅ.ಸಾ.1 ಮತ್ತು 2 ರವರನ್ನಾಗಿ ವಿಚಾರಣೆಗೆ ಒಳಪಡಿಸಿ ಕೊಂಡು ನಿಪಿ.1 ರಿಂದ ನಿಪಿ.3 ದಾಖಲೆಗಳನ್ನು ಗುರ್ತಿಸಿ ಕೊಂಡಿರುತ್ತಾರೆ. ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿಯಾದ ಅ.ಸಾ.1 ಮತ್ತು ಅ.ಸಾ.2 ರವರು ಅಭಿಯೋಜನೆಯನ್ನು

ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತರ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರದಿದ್ದ ಕಾರಣ ಅವರನ್ನು ಅಪರಾಧಿಕ ಸಂಹಿತೆ ಕಲಂ 313 ರಡಿಯಲ್ಲಿ ಪ್ರಶ್ನಿಸಿ ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈಬಿಡಲಾಗಿದೆ.

**5.** ಉಭಯತ್ರರ ವಾದವನ್ನು ಆಲಿಸಿ ಕಡತವನ್ನು ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಬಂದಿರುತ್ತವೆ.

**<u>ಅಂಶಗಳು</u>**

**ಅಂಶ-1 :** ದಿನಾಂಕ 27-04-2024 ರಂದು ಮಧ್ಯಾಹ್ನ 12-30ಗಂಟೆ ಸಮಯದಲ್ಲಿ ಪಾತಪಳ್ಯ ಠಾಣಾ ಸರಹದ್ದಿನ ಬಾಗೇಪಲ್ಲಿ, ತಾಲ್ಲೂಕಿನ ರಾಚವಾರಿಪಲ್ಲಿ ಗ್ರಾಮದ ಸಾಕ್ಷಿ-1 ಮತ್ತು 2 ರವರು ತಮ್ಮ ಮಗುವಿಗೆ ಆರೋಗ್ಯ ಸರಿಯಿಲ್ಲದ ಕಾರಣ ಚಿಕಿತ್ಸೆಗಾಗಿ ಬಸ್ಸಿನಲ್ಲಿ ಬಾಗೇಪಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಾಗ, 3ನೇ ಆರೋಪಿಯು ಸಾಕ್ಷಿ-2 ರವರಿಗೆ ಜಮೀನಿನ ತಕರಾರಿನ ವಿಚಾರದಲ್ಲಿ ಫೋನ್ ಮಾಡಿ ಎಲ್ಲಿದಿಯಾ ಬಾ ನಾ ಕೊಡಕ ನಿ ಎಮ್ಮ ದೆಂಗಾ ಲೋಪರ್ ನ ಕೊಡಕಾ ಇತ್ಯಾದಿ ಅವಾಚ್ಯ ಶಬ್ದಗಳಿಂದ ಬೈದಿದ್ದು ಈ ಬಗ್ಗೆ 3ನೇ ಆರೋಪಿಯನ್ನು ವಿಚಾರಿಸೋಣವೆಂದು ಸಾಕ್ಷಿ-1 ಮತ್ತು 2 ರವರು ಬಸ್ಸಿನಿಂದ ಇಳಿದು ಪುನಃ ಬೇರೆ ಬಸ್ಸಿನಲ್ಲಿ ವಾಪಸ್ಸು ರಾಚವಾರಿಪಲ್ಲಿ ಗ್ರಾಮಕ್ಕೆ ಹೋಗಿ ಅದೇ ದಿನ ಮದ್ಯಾಹ್ನ 1-00 ಗಂಟೆಯಲ್ಲಿ ಸದರಿ ಗ್ರಾಮದ ಸಾಕ್ಷಿ-3 ರವರ ಮನೆಯ ಮುಂದೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಅಲ್ಲಿಯೇ ಕಾಯ್ದು ಕೊಂಡಿದ್ದ 1ನೇ ರಿಂದ 3 ಆರೋಪಿಗಳು ಸಮಾನ ಉದ್ದೇಶದಿಂದ ಸಾಕ್ಷಿ-1 ಮತ್ತು 2 ರವರನ್ನು ಅವಾಚ್ಯ

ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡಿದ್ದು, ಆ ಪ್ರಕಾರ ಆರೋಪಿಗಳು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-2 :** ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಆ ಪೈಕಿ 3ನೇ ಆರೋಪಿಯು ಸ್ವಯಂ ಪ್ರೇರಣೆಯಿಂದ ಸಾಕ್ಷಿ-1 ಮತ್ತು 2 ರವರೊಂದಿಗೆ ಗಲಾಟೆ ಮಾಡಿ ಏಕಾಏಕಿ ನಿಮ್ಮ ಕೈಯಲ್ಲಿ ಕಬ್ಬಿಣದ ರಾಡ್ ನಿಂದ ಸಾಕ್ಷಿ-2 ರವರ ಹಣೆಯ ಬಲಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿದ್ದು ಅಲ್ಲದೇ 2ನೇ ಆರೋಪಿಯಾದ ನೀವು ದೊಣ್ಣೆಯಿಂದ ಸಾಕ್ಷಿ-2 ರವರ ಮೈಮೇಲೆ ಹೊಡೆದು ಮೂಗೇಟು ಉಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-3 :** ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ ಆ ಪೈಕಿ 3ನೇ ಆರೋಪಿಯು ಸ್ವಯಂ ಪ್ರೇರಣೆಯಿಂದ ಸಾಕ್ಷಿ-1 ಮತ್ತು 2 ರವರೊಂದಿಗೆ ಗಲಾಟೆ ಮಾಡಿ ಆರೋಪಿಯು ಸಾಕ್ಷಿ-1 ರವರಿಗೆ ಕಾಲಿನಿಂದ ಹೊಟ್ಟೆಗೆ ಒದು ನೋವುಂಟು ಮಾಡಿದ್ದು ಅಲ್ಲದೇ 4ನೇ ಆರೋಪಿಯು ಸಾಕ್ಷಿ-1 ರವರ

ಜುಟ್ಟನ್ನು ಹಿಡಿದು ಎಳೆದು ನೆಲದ ಮೇಲೆ ಬೀಳಿಸಿ ಎಳೆದಾಡಿ ನೋವುಂಟು ಮಾಡಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-4 :** ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಸಾಕ್ಷಿ-1 ಮತ್ತು 2 ರವರೊಂದಿಗೆ ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ ಗಲಾಟೆ ಮಾಡಿದ್ದು ಆ ಪೈಕಿ 3ನೇ ಆರೋಪಿಯು ಅವಮಾನಿಸುವ ಉದ್ದೇಶದಿಂದ ಸಾಕ್ಷಿ-2 ರವರಿಗೆ ಚಪ್ಪಲಿಯಿಂದ ಸಾರ್ವಜನಿಕ ಸ್ಥಳದಲ್ಲಿ ಹೊಡೆದು ಅವಮಾನವನ್ನುಂಟು ಮಾಡಿ ಸಾಕ್ಷಿ-2 ರವರ ಮೇಲೆ ಹಲ್ಲೆ ಅಥವಾ ಬಲಪ್ರಯೋಗ ಮಾಡಿದ್ದು ಆ ಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 355 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-5 :** ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ ಆರೋಪಿತರು ಸಾಕ್ಷಿ-1 ಮತ್ತು 2 ರವರೊಂದಿಗೆ ಗಲಾಟೆ ಮಾಡಿ ಅವರನ್ನು ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತೀರಿ, ಆ ಪ್ರಕಾರ ಆರೋಪಿಗಳು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-6 :** ಹಾಗಿದ್ದರೆ ಏನು ಆದೇಶ ?

**6.** ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆಃ

| | | |
|---|---|---|
| ಅಂಶ 1 | - | ನಕಾರಾತ್ಮಕವಾಗಿ |
| ಅಂಶ 2 | - | ನಕಾರಾತ್ಮಕವಾಗಿ |
| ಅಂಶ 3 | - | ನಕಾರಾತ್ಮಕವಾಗಿ |
| ಅಂಶ 4 | - | ನಕಾರಾತ್ಮಕವಾಗಿ |
| ಅಂಶ 5 | - | ನಕಾರಾತ್ಮಕವಾಗಿ |
| ಅಂಶ 6 | - | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

**: ಕಾರಣಗಳು :**

**7.** **ಅಂಶ ಸಂಖ್ಯೆ 1 ರಿಂದ 5** ಅಭಿಯೋಜನೆಯ ಸಂಕ್ಷಿಪ್ತ ಪ್ರಕರಣದ ಸಾರಾಂಶವನ್ನು ಈಗಾಗಲೇ ಖಂಡಿಕೆ-2 ರಲ್ಲಿ ಹೇಳಲಾಗಿದ್ದು, ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಾದ ಅ.ಸಾ.1 ರವರು ಪ್ರಥಮ ವರ್ತಮಾನ ಹೇಳಿಕೆ ನೀಡಿದ ಸಾಕ್ಷಿದಾರರು ಹಾಗೂ ಗಾಯಾಳುಗಳಾಗಿದ್ದು ಅ.ಸಾ.2 ರವರನ್ನು ಗಾಯಾಳು ಸಾಕ್ಷಿದಾರರಾಗಿರುತ್ತಾರೆ. ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತು ಪಡಿಸುವಲ್ಲಿ ಈ ಮೇಲ್ಕಂಡ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿದ್ದಾರೆ.

**8.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಫಿರ್ಯಾದಿ ಸಾಕ್ಷಿ ಅ.ಸಾ.1 ಸುನೀತಾ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರುವ  ಆರೋಪಿಗಳು ಗೊತ್ತು. ಆರೋಪಿಗಳು ನನಗಾಗಲೀ ಅಥವಾ ಚಾಸಾ-2 ರವರಿಗಾಗಲೀ ಯಾವತ್ತೂ ಕೈಗಳಿಂದ ಅಥವಾ ಕಬ್ಬಿಣದ ರಾಡಿನಿಂದಾಗಲೀ ಮತ್ತು ಚಪ್ಪಲಿಯಿಂದಾಗಲೀ

ಹೊಡೆದು ಹಲ್ಲೆ ಮಾಡಿರುವುದಿಲ್ಲ. ನನಗಾಗಲಿ ಅಥವಾ ಚಾಸಾ 2 ರವರಿಗೆ ಆಗಲಿ ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಆಸ್ಪತ್ರೆಗೆ ಹೋಗಿದ್ದಾಗ, ಪೋಲೀಸರು ನನ್ನಿಂದ ಕೆಲವೊಂದು ದಾಖಲೆಗಳಿಗೆ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿದಾರರು ದೂರಿನ್ನು  ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಿದ್ದು ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**9.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಗಾಯಾಳು ಸಾಕ್ಷಿ ಅ.ಸಾ-2 ರಾಜಶೇಖರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರುವ  ಆರೋಪಿಗಳು ಗೊತ್ತು, ಆರೋಪಿಗಳು ನನಗಾಗಲೀ ಅಥವಾ ಚಾಸಾ-1 ರವರಿಗಾಗಲೀ ಯಾವತ್ತೂ ಕೈಗಳಿಂದ ಅಥವಾ ಕಬ್ಬಿಣದ ರಾಡಿನಿಂದಾಗಲೀ  ಮತ್ತು ಚಪ್ಪಲಿಯಿಂದಾಗಲೀ ಹೊಡೆದು ಹಲ್ಲೆ ಮಾಡಿರುವುದಿಲ್ಲ. ನನಗಾಗಲಿ ಅಥವಾ ಚಾಸಾ 1ರವರಿಗೆ ಆಗಲಿ ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರು ನನ್ನ ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದು ಕೊಂಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**10.** ಈ ಮೇಲೆ ಹೇಳಿದ ಮೌಖಿಕ ಸಾಕ್ಷ್ಯಕ್ಕೆ ಬೆಂಬಲವಾಗಿ, ಅಭಿಯೋಜನೆಯವರು ಅಸಾ.1 ರವರು ನೀಡಿದ ದೂರನ್ನು ನಿಪಿ.1 ಎಂದು, ಅಸಾ.1 ರವರು ನೀಡಿದ ಹೇಳಿಕೆಯನ್ನು ನಿಪಿ.2 ಎಂದು, ಮತ್ತು ಅಸಾ.2 ರವರು ನೀಡಿದ ಹೇಳಿಕೆಯನ್ನು ನಿಪಿ.3 ಎಂದು ಗುರ್ತಿಸಿಕೊಂಡಿರುತ್ತಾರೆ.

**13.** ಅಭಿಯೋಜನೆಯು ಪ್ರಾ.ಸಾ.1 ಮತ್ತು 2 ರವರನ್ನು  ಪಾಟೀ ಸವಾಲುಗೊಳಿಸಿದರೂ ಸದರಿ ಸಾಕ್ಷಿದಾರರಿಂದ ಅಭಿಯೋಜನೆಯನ್ನು

ಬೆಂಬಲಿಸುವಂತಹ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ಹೊರತೆಗೆಯಲಾಗಲಿಲ್ಲ. ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಪಟ್ಟಂತೆ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯದ ಅವಲೋಕನ ಮಾಡಿ ನೋಡಿದಾಗ ಅಭಿಯೋಜನೆ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಪ್ರಾ.ಸಾ.1 ಮತ್ತು 2 ರವರು ಅಭಿಯೋಜನೆಯನ್ನು ಬೆಂಬಲಿಸದೇ ಪ್ರತಿಕೂಲ ಹೊಂದಿದ್ದು, ಅಭಿಯೋಜನೆಗೆ ಆಘಾತಕಾರಿ ಆಗಿರುತ್ತದೆ. ಆದುದರಿಂದ ಅಭಿಯೋಜನೆಯವರು ಹೇಳುವಂತಹ ಘಟನೆ ನಡೆದಿರುವ ಸಾಧ್ಯತೆ ಇದೆ ಎಂದು ತೋರಿಸಲು ಅಭಿಯೋಜನೆ ವಿಪಲ್ಲಿವಾಗಿದೆ. ಆದ್ದರಿಂದ 1 ರಿಂದ 4ನೇ ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ನಿರ್ಣಯಿಸಿ, ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ 1 ರಿಂದ 5 ನ್ನು **ನಕಾರಾತ್ಮಕವಾಗಿ** ಉತ್ತರಿಸಿದೆ.

**14.** **<u>ಅಂಶ ಸಂಖ್ಯೆ-6:</u>** ಮೇಲ್ಕಂಡ ಚರ್ಚೆಯಲ್ಲಿ ಅಂಶ-1 ರಿಂದ 5 ನ್ನು ನಕಾರಾತ್ಮಕವಾಗಿ ಉತ್ತಸಿರುವುದರಿಂದ 1 ರಿಂದ 4ನೇ ಆರೋಪಿತರು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಆದೇಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದ 1 ರಿಂದ 4ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ, ಕಲಂ 504,

324, 323, 355, 506 ಮತ್ತು ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ 1 ರಿಂದ 4ನೇ ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮಾಲುಪಟ್ಟಿ ಸಂಖ್ಯೆ:- 31/2024 ದಿನಾಂಕ 28.04.2024 ರಲ್ಲಿ ನಮೂದಿಸಿರುವ ಕ್ರ ಸಂ.1. ಹ್ಯಾಂಡ್ ಫುಲ್ ಗಾತ್ರ ಮತ್ತು 3 ಅಡಿ ಉದ್ದ ಒಂದು ಕ್ಲಬ್, ಕ್ರ ಸಂ.2. ಬೆರಳಿನ ಗಾತ್ರ ಮತ್ತು 2 ಅಡಿ ಉದ್ದದ ಒಂದು ಕಬ್ಬಿಣದ ರಾಡ್ ಮತ್ತು ಕ್ರ ಸಂ.3. 9 ಇಂಚುಗಳ ಪ್ಯಾರಾಕಾನ್ ಕಂಪನಿ ಎಡಗಾಲು ಒಂದು ಸ್ಲೀಪರ್.

ಇದರಲ್ಲಿ ಕ್ರ ಸಂ.2. ಬೆರಳಿನ ಗಾತ್ರ ಮತ್ತು 2 ಅಡಿ ಉದ್ದದ ಒಂದು ಕಬ್ಬಿಣದ ರಾಡ್ ಬೆಲೆ ಬಾಳುವ ವಸ್ತುವಾಗಿದ್ದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ಸರಕಾರಕ್ಕೆ ಮೂಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

ಮತ್ತು ಕ್ರಮ ಸಂಖ್ಯೆ 1 ಮತ್ತು 3 ರಲ್ಲಿರುವ ವಸ್ತುಗಳು ಬೆಲೆ ಬಾಳದ ವಸ್ತುವಾಗಿದ್ದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ಶೀಘ್ರಲಿಪಿಗಾರಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ಕೊಟ್ಟಿದ್ದು, ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 31ನೇ ಜುಲೈ - 2026 ರಂದು ತೆರೆದು ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

**ಸಹಿ/-**
**(ಶ್ರೀಮತಿ. ರಂಜಿತ. ಎಸ್)**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

## : ಅನುಬಂಧ :

**1) ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :**

| | | |
|---|---|---|
| ಪ್ರಾಸಾ.1 | : | ಸುನೀತಾ |
| ಪ್ರಾಸಾ.2 | : | ರಾಜಶೇಖರ್ |

**2) ಅಭಿಯೋಜನೆ ಪರ ಗುತಿರ್ಸಿದ ದಾಖಲಾತಿಗಳು :**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಸಾಕ್ಷಿ ಸಹಿ |
| ನಿಪಿ-2 | : | ಪ್ರಾಸಾ.1 ರವರ ಹೇಳಿಕೆ |
| ನಿಪಿ-3 | : | ಪ್ರಾಸಾ.2 ರವರ ಹೇಳಿಕೆ |

**3) ಆರೋಪಿತರ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು**

ಇರುವುದಿಲ್ಲ.

**4) ಮುದ್ದೆ ಮಾಲುಗಳು :**

ಮಾಲುಪಟ್ಟಿ ಸಂಖ್ಯೆಃ- 31/2024 ದಿನಾಂಕ 28.04.2024 ರಲ್ಲಿ ನಮೂದಿಸಿರುವ ಕ್ರ ಸಂ.1. ಹ್ಯಾಂಡ್ ಫುಲ್ ಗಾತ್ರ ಮತ್ತು 3 ಅಡಿ ಉದ್ದ ಒಂದು ಕ್ಲಬ್, ಕ್ರ ಸಂ.2. ಬೆರಳಿನ ಗಾತ್ರ ಮತ್ತು 2 ಅಡಿ ಉದ್ದದ ಒಂದು ಕಬ್ಬಿಣದ ರಾಡ್ ಮತ್ತು ಕ್ರ ಸಂ.3. 9 ಇಂಚುಗಳ ಪ್ಯಾರಾಕಾನ್ ಕಂಪನಿ ಎಡಗಾಲು ಒಂದು ಸ್ಲೀಪರ್.

**ಸಹಿ/-**

**( ಶ್ರೀಮತಿ. ರಂಜಿತ. ಎಸ್)**

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

Case celled out.
Accused all are absent.

(ತೀರ್ಪನ್ನು ಪ್ರತ್ಯೇಕ ಹಾಳೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**ಆದೇಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದ 1 ರಿಂದ 4ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ, ಕಲಂ 504, 324, 323, 355, 506 ಮತ್ತು ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ 1 ರಿಂದ 4ನೇ ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮಾಲುಪಟ್ಟಿ ಸಂಖ್ಯೆ:- 31/2024 ದಿನಾಂಕ 28.04.2024 ರಲ್ಲಿ ನಮೂದಿಸಿರುವ ಕ್ರ ಸಂ.1. ಹ್ಯಾಂಡ್ ಪುಲ್ ಗಾತ್ರ ಮತ್ತು 3 ಅಡಿ ಉದ್ದ ಒಂದು ಕ್ಲಬ್, ಕ್ರ ಸಂ.2. ಬೆರಳಿನ ಗಾತ್ರ ಮತ್ತು 2 ಅಡಿ ಉದ್ದದ ಒಂದು ಕಬ್ಬಿಣದ ರಾಡ್ ಮತ್ತು ಕ್ರ ಸಂ.3. 9 ಇಂಚುಗಳ ಪ್ಯಾರಾಕಾನ್ ಕಂಪನಿ ಎಡಗಾಲು ಒಂದು ಸ್ಲೀಪರ್.

ಇದರಲ್ಲಿ ಕ್ರ ಸಂ.2. ಬೆರಳಿನ ಗಾತ್ರ ಮತ್ತು 2 ಅಡಿ ಉದ್ದದ ಒಂದು ಕಬ್ಬಿಣದ ರಾಡ್ ಬೆಲೆ ಬಾಳುವ ವಸ್ತುವಾಗಿದ್ದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ಸರಕಾರಕ್ಕೆ ಮೂಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

ಕ್ರಮ ಸಂಖ್ಯೆ 1 ಮತ್ತು 3 ರಲ್ಲಿರುವ ವಸ್ತುಗಳು ಬೆಲೆ ಬಾಳದ ವಸ್ತುವಾಗಿದ್ದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

**ಸಹಿ/-**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.